

## ಊರಲ್ಲಿರುವುದಿಲ್ಲ...

ಮರಿ ಗುಂಡನ ಅರಚಾಟ ಕೇಳಿ ಪಕ್ಕದ ಮನೆ ಬಸ್ಯಾ ಓಡುನಡಿಗೆಯಲ್ಲಿ ಬಂದು ಹಣಕಿದಾಗ ಕಂಡದ್ದು ಅಪ್ಪ ಗುಂಡ ಮರಿಗುಂಡನಿಗೆ ಹಿಗ್ಗಾ ಮುಗ್ಗಾ ಥಳಿಸುತ್ತಿದ್ದ ದೃಶ್ಯ!

'ರೀ... ಅದ್ಯಾಕ್ ಹಂಗ್ ದನಕ್ ಬಡಿದ್ಹಾಂಗೆ ಬಡೀತಿದ್ದೀರಾ?' ಬಸ್ಯಾ ಪ್ರಶ್ನಿಸಿದ.

'ನಾಳೆ ಅವನ ಫಲಿತಾಂಶದ ದಿನ!'

'ಅಯ್ಯೋ... ನಾಳೆ ಅವನ ಫಲಿತಾಶ ಬರೋದಕ್ಕೂ ಇವತ್ತು ಅವನನ್ನ ಹೊಡೆಯೋದಕ್ಕೂ ಏನ್ರೀ ಸಂಬಂಧ...' ಅಸಹನೆಯಿಂದ ಬಸ್ಯಾ ಪ್ರಶ್ನಿಸಿದ.

'ನಾಳೆ ನಾನು ಊರಲ್ಲಿರಲ್ಲ...' ಉತ್ತರಿಸುತ್ತಲೇ ಮರಿಗುಂಡನಿಗೆ ಥಳಿಸುವುದನ್ನು ಮುಂದುವರಿಸಿದ ಅಪ್ಪ ಗುಂಡನ ವರಸೆಗೆ ಬಸ್ಯಾ ದಂಗಾಗಿ ಹೋದ!

**ಲತಾ ಹೆಗಡೆ**

## ಉಪಾಯ

ಒಬ್ಬ ವಯಸ್ಸಾದ ವ್ಯಕ್ತಿ ಅಮೆರಿಕದ ಸಣ್ಣ ಪಟ್ಟಣವೊಂದರಲ್ಲಿ ವಾಸಿಸುತ್ತಿದ್ದ. ಅವನ ಒಬ್ಬನೇ ಮಗ ಯಾವುದೋ ಕಾರಣದಿಂದ ಜೈಲು ಸೇರಿದ್ದ. ಒಮ್ಮೆ ಆ ವೃದ್ಧ ವ್ಯಕ್ತಿ ಮಗನಿಗೊಂದು ಪತ್ರ ಬರೆದ.

'ಪ್ರೀತಿಯ ಮಗನೇ, ನಾನು ತುಂಬಾ ಆತಂಕದಲ್ಲಿದ್ದೇನೆ. ಈಗ ನಾವು ಆಲೂಗಡ್ಡೆಯನ್ನು ಬಿತ್ತಬೇಕಾದ ಕಾಲ. ನನಗೆ ವಯಸ್ಸಾಗಿರೋದ್ರಿಂದ ಹೊಲವನ್ನು ಉತ್ತು ಹದಮಾಡುವುದಕ್ಕೆ ನನ್ನಿಂದ ಸಾಧ್ಯವಾಗುವುದಿಲ್ಲ. ನೀನು ಇದ್ದಿದ್ದರೆ ಸಹಾಯವಾಗುತ್ತಿತ್ತು. ಬಹುಶಃ ಈ ವರ್ಷ ನಾವು ಆಲೂಗೆಡ್ಡೆ ಬೆಳೆಯುವ ಯೋಚನೆಯನ್ನು ಬಿಡಬೇಕಾದಿತು ಅನ್ನಿಸಿ ಬೇಜಾರಾಗುತ್ತದೆ –ನಿನ್ನ ಪ್ರೀತಿಯ ಅಪ್ಪ.'

ಈ ಪತ್ರ ಸಿಕ್ಕ ಕೂಡಲೇ ಮಗ ಜೈಲಿನಿಂದ ಒಂದು ಟೆಲಿಗ್ರಾಮ್ ಕಳಿಸಿದ. 'ಅಪ್ಪಾ, ದಯವಿಟ್ಟು ನಮ್ಮ ಆಲೂಗೆಡ್ಡೆಯ ಹೊಲವನ್ನು ಅಗೆಯುವ ತಪ್ಪನ್ನು ಮಾಡಬೇಡ. ಅಲ್ಲಿ ತಾನೆ ನಾನು ಬಂದೂಕುಗಳನ್ನು ಹೂಳಿರುವುದು –ನಿಮ್ಮ ಪ್ರೀತಿಯ ಮಗ.'

ಮರುದಿನ ಬೆಳಗ್ಗೆಯೇ ಪೊಲೀಸರು ಕೂಲಿಕಾರರನ್ನು ಕರೆದುಕೊಂಡು ಬಂದು ಆ ವೃದ್ಧನ ಹೊಲವನ್ನು ಅಗೆದರು. ಅಲ್ಲಿ ಅವರಿಗೇನೂ ಸಿಗಲಿಲ್ಲ. ಅವರಿಗೆ ಇದ್ದಿದ್ದರೆ ತಾನೆ ಸಿಗುವುದು! ನಿರಾಸೆಯಿಂದ ವಾಪಸ್ಸಾದರು. ಅಪ್ಪ ಗಾಬರಿಯಿಂದ ಮಗನಿಗೆ ನಡೆದಿದ್ದನ್ನೆಲ್ಲ ವಿವರಿಸಿ ಪತ್ರ ಬರೆದು ಈಗ ಏನು ಮಾಡುವುದೆಂದು ಕೇಳಿದ. ಮಗನಿಂದ ಮರುದಿನವೇ ಪತ್ರ ಬಂತು: 'ಅಪ್ಪಾ. ಹೇಗೂ ಹೊಲವನ್ನೆಲ್ಲಾ ಅಗೆದಾಗಿದೆಯಲ್ಲ, ಇನ್ನು ನೆಮ್ಮದಿಯಿಂದ ಆಲೂಗೆಡ್ಡೆಯನ್ನು ಬಿತ್ತಿಬಿಡು! ನನ್ನಿಂದ ಸಾಧ್ಯವಾದುದನ್ನು ಮಾಡಿದ್ದೇನೆ –ನಿನ್ನ ಪ್ರೀತಿಯ ಮಗ.'

**ಕೆ.ಎಸ್. ನೀತಾ**



ಚಿತ್ರಗಳು: ಗಣೇಶ ಆಚಾರ್ಯ